

# ‘ಭೈರತಿ ರಣಗಲ್’ನಲ್ಲಿ ಶಿವಣ್ಣನ ಹೊಸ ಸ್ಟೈಲ್ ಸ್ಟೇಟ್‌ಮೆಂಟ್

2024ರ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದಾಗಿರುವ, ನಟ ಶಿವರಾಜ್‌ಕುಮಾರ್ ನಟನೆಯ ‘ಭೈರತಿ ರಣಗಲ್’ ಸಿನಿಮಾ ಇದೇ ಆಗಸ್ಟ್ 15ಕ್ಕೆ ಬಿಡುಗಡೆಯಾಗುತ್ತಿದೆ. ಈ ಸಿನಿಮಾದಲ್ಲಿ ಶಿವಣ್ಣನ ಲುಕ್ ಕೂಡ ಭಿನ್ನವಾಗಿದ್ದು, ಗಮನ ಸೆಳೆಯುವಂತಿದೆ.

“ಭೈರತಿ ರಣಗಲ್ 6 ವರ್ಷಗಳ ಹಿಂದೆ ಬಿಡುಗಡೆಯಾದ ‘ಮಫ್ತಿ’ ಚಿತ್ರದ ಪ್ರಿಕ್ವೆಲ್ ಆಗಿದೆ. ಆ ಸಿನಿಮಾದಲ್ಲಿದ್ದ ಭೈರತಿ ರಣಗಲ್‌ನ ಕಥೆಯನ್ನು ಇಲ್ಲಿ ಬೆಳೆಸಲಾಗಿದೆ. ಭೈರತಿ ಯಾಕೆ ಗ್ಯಾಂಗ್‌ಸ್ಟರ್ ಆದ ಎಂಬ ಹಿನ್ನೆಲೆಯನ್ನಿಟ್ಟುಕೊಂಡು ಕಥೆ ಹೆಣೆಯಲಾಗಿದೆ. ಜೊತೆಗೆ, ಶಿವಣ್ಣ ಈ ಚಿತ್ರದಲ್ಲಿ ಯಾವಾಗಲೂ ಯಾಕೆ ಕಪ್ಪು ಬಣ್ಣದ ಬಟ್ಟೆ ಧರಿಸುತ್ತಾರೆ ಎಂಬುದೂ ಚಿತ್ರದ ಕುತೂಹಲಕರ ಸಂಗತಿ” ಎಂದು ಚಿತ್ರದ ಹಿನ್ನೆಲೆಯನ್ನು ವಿವರಿಸಿದ್ದಾರೆ ನಿರ್ದೇಶಕ ನರ್ತನ್.

ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಗೀತಾ ಶಿವರಾಜಕುಮಾರ್ ಅವರು ನಿರ್ಮಿಸುತ್ತಿರುವ ಚಿತ್ರಕ್ಕೆ ನರ್ತನ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ರುಕ್ಮಿಣಿ ವಸಂತ್, ರಾಹುಲ್ ಬೋಸ್, ಅವಿನಾಶ್ , ದೇವರಾಜ್, ಮಧು ಗುರುಸ್ವಾಮಿ, ಛಾಯಾ ಸಿಂಗ್, ಬಾಬು ಹಿರಣ್ಣಯ್ಯ ಮುಂತಾದವರು ಅಭಿನಯಿಸುತ್ತಿದ್ದಾರೆ. ಚಿತ್ರಕ್ಕೆ ನವೀನ್ ಕುಮಾರ್ ಛಾಯಾಚಿತ್ರಗ್ರಹಣ ಮತ್ತು ರವಿ ಬಸ್ರೂರು ಅವರ ಸಂಗೀತವಿದೆ. ■



# ಕುಣಿಯಲು ಅಭ್ಯಂತರವಿಲ್ಲ ತಾನ್ಯಾ

ಸಿನಿಮಾಗಳಲ್ಲಿ ಸ್ಪೆಷಲ್ ಹಾಡುಗಳಿಗೆ ಹೆಜ್ಜೆ ಹಾಕುವುದಕ್ಕೆ ತಮಗೆ ಯಾವುದೇ ಅಭ್ಯಂತರ, ಅಂಜಿಕೆ ಇಲ್ಲ ಎಂದಿದ್ದಾರೆ ನಟಿ ತಾನ್ಯಾ ಹೋಪ್. ಸಿನಿಮಾದಲ್ಲಿ ನೃತ್ಯ ಮಾಡುವ ಅವಕಾಶ ಎಲ್ಲರಿಗೂ ಸಿಗುವಂಥದ್ದಲ್ಲ. ಸ್ಪೆಷಲ್ ಸಾಂಗ್‌ಗೆ ಕುಣಿಯಲು ಅವಕಾಶ ಸಿಗುವುದು ಅದೃಷ್ಟದ ವಿಷಯ. ಅಂಥ ಹಾಡುಗಳಿಗೆ ಹೆಜ್ಜೆ ಹಾಕಲು ನನಗೆ ಯಾವುದೇ ಹಿಂಜರಿಕೆಯಿಲ್ಲ ಎಂದೂ ಹೇಳಿದ್ದಾರೆ.

ಸಿನಿಮಾಗಳಿಗಿಂತ ಸಿನಿಮಾಗಳ ಸ್ಪೆಷಲ್ ಸಾಂಗ್‌ನಲ್ಲಿ ಕಾಣಿಸಿಕೊಳ್ಳುವುದರಿಂದಲೇ ಜನಪ್ರಿಯತೆ ಪಡೆಯುತ್ತಿದ್ದಾರೆ ತಾನ್ಯಾ. ‘ಯಜಮಾನ’ ಸಿನಿಮಾದಲ್ಲಿ ಬಸಣ್ಣಿಯಾಗಿ ಹೆಜ್ಜೆ ಹಾಕಿದ್ದ ಅವರು, ಉಪೇಂದ್ರ ಅಭಿನಯದ ‘ಕಬ್ಜ’ ಸಿನಿಮಾದಲ್ಲಿಯೂ ಗೆಜ್ಜೆ ಕಟ್ಟಿದ್ದರು. ಇದೀಗ ನಿರ್ದೇಶಕ ಇಂದ್ರಜಿತ್ ಲಂಕೇಶ್ ಪುತ್ರ ಸಮರ್ಜಿತ್ ಲಂಕೇಶ್ ನಟಿಸಿರುವ ‘ಗೌರಿ’ ಸಿನಿಮಾದಲ್ಲಿಯೂ ಸಮರ್ಜಿತ್ ಲಂಕೇಶ್ ಜೊತೆ ನೃತ್ಯ ಮಾಡಿದ್ದಾರೆ.

ಈ ನೃತ್ಯವು ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಅರ್ಪಣೆ ಎಂದೂ ಹೇಳಿದ್ದಾರೆ.

ಸಿನಿಮಾಗಳಲ್ಲಿ ಹಾಡುಗಳಿಗೆ ಹೆಜ್ಜೆ ಹಾಕುವುದಕ್ಕಷ್ಟೇ ಸೀಮಿತಗೊಳ್ಳುತ್ತಿರುವ ಸಂಬಂಧ ಪ್ರಶ್ನೆಯೊಂದಕ್ಕೆ ಉತ್ತರಿಸಿರುವ ಅವರು, ‘ನನಗೆ ಟೈಪ್‌ಕಾಸ್ಟ್ ಆಗುವ ಚಿಂತೆಯಿಲ್ಲ, ಹಾಗಾದರೂ ಅದರಿಂದ ನನಗೆ ಒಳ್ಳೆಯದೇ ಆಗಿದೆ. ವಿಶೇಷ ಹಾಡು ಎನ್ನುವುದೇ ವಿಶೇಷತೆಯನ್ನು ಸೂಚಿಸುತ್ತದೆಯಲ್ಲವೇ’ ಎಂದಿದ್ದಾರೆ. ಮತ್ತೂ ಮುಂದುವರೆಸಿ, ‘ಕೆಲವು ಸಿನಿಮಾ, ಬಾಕ್ಸಾಫೀಸ್‌ನಲ್ಲಿ ಸದ್ದು ಮಾಡದೇ ಇದ್ದರೂ ಅವುಗಳಲ್ಲಿ ನಾನು ಕುಣಿದಿದ್ದ ಹಾಡು ಸಖತ್ ಹಿಟ್ ಆಗಿದೆ. ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ’ ಎಂದು ವಿವರಿಸಿದ್ದಾರೆ.

“ಪ್ರೇಕ್ಷಕರಿಗೆ ಹತ್ತಿರವಾಗುವ ಅಂಥದ್ದೊಂದು ಅವಕಾಶ ಸಿಕ್ಕಾಗ, ಅದನ್ನು ಇಷ್ಟಪಟ್ಟು ಕೈಗೆತ್ತಿಕೊಳ್ಳುತ್ತೇನೆ. ಒಬ್ಬ ಕಲಾವಿದೆಯಾಗಿ, ನಾನು ಪರ್ಫಾರ್ಮ್ ಮಾಡುವಾಗ ಆ ಹಾಡಿನಲ್ಲಿ ಒಂದಾಗಿರುತ್ತೇನೆ. ಈ ರೀತಿಯ ಹಾಡುಗಳು ನಮ್ಮ ಇಮೇಜ್ ಬೆಳೆಸುತ್ತವೆ. ಸಿನಿಮಾಗೂ ಬೇರೆಯದೇ ವೈಬ್ ದಕ್ಕಿಸಿಕೊಡುತ್ತದೆ. ಜೊತೆಗೆ ಎನರ್ಜಿ ತುಂಬುತ್ತದೆ” ಎಂದು ಮಾತನಾಡಿದ್ದಾರೆ. ■